# ಡಾ॥ ಆರ್. ಬಾಲಸುಬ್ರಮಣ್ಯಂ

## <u>ಸಂಸ್ಥಾಪಕರು, ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್ – ಅಧ್ಯಕ್ಷರು, ಗ್ರಾಮ್</u>

ಡಾ॥ ಆರ್. ಬಾಲಸುಬ್ರಮಣ್ಯಂ (ಬಾಲು) ರವರು ಒಬ್ಬ ಅಭಿವೃದ್ಧಿ ಚಿಂತಕ, ಕ್ರಿಯಾವಾದಿ, ಸಾಮಾಜಿಕ ನವ ನಿರ್ಮಿತಿಕಾರ, ನಾಯಕತ್ವ ತರಬೇತುದಾರ ಹಾಗು ಲೇಖಕ. ವೃತ್ತಿಯಲ್ಲಿ ವೈದ್ಯರಾಗಿರುವ ಬಾಲುರವರು, ವೈದ್ಯಕೀಯ ಪದವಿಯ ನಂತರ ಬಿ.ಐ.ಟಿ.ಎಸ್ ಪಿಲಾನಿಯಲ್ಲಿ 'ಸಾರ್ವಜನಿಕ ಆರೋಗ್ಯ' ಮತ್ತು 'ಆಸ್ಪತ್ರೆ ನಿರ್ವಹಣೆ' ವಿಷಯಗಳಲ್ಲಿ ಎಂ.ಫಿಲ್ ಪದವಿಯನ್ನು, ಹಾರ್ವರ್ಡ್ ವಿಶ್ವವಿದ್ಯಾನಿಲಯದ, ಹಾರ್ವರ್ಡ್ ಕೆನಡಿ ಸ್ಕೂಲ್‌ನಲ್ಲಿ ಸಾರ್ವಜನಿಕ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ವಿವೇಕಾನಂದರ ಜೀವನ ಹಾಗು ಸಂದೇಶಗಳಿಂದ ಪ್ರೇರಿತರಾಗಿ ತಮ್ಮ 19ನೇ ವಯಸ್ಸಿನಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಎಂಬ ಸರ್ವೋತ್ತಮ ಸಂಸ್ಥೆಯನ್ನು ಅಹಿಂಸೆ, ಸತ್ಯ, ಸೇವಾ ಮತ್ತು ತ್ಯಾಗ ತತ್ವದ ಮೇಲೆ ಸ್ಥಾಪಿಸಿ, ಮೂರು ದಶಕಗಳಿಂದ ಗ್ರಾಮೀಣ ಹಾಗೂ ಗಿರಿಜನರ ಅಭಿವೃದ್ಧಿಗೋಸ್ಕರ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಇಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯು, ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಸರಗೂರು ಮತ್ತು ಕೆಂಚನಹಳ್ಳಿಯಲ್ಲಿ ವಿವೇಕಾನಂದ ಸ್ಮಾರಕ ಆಸ್ಪತ್ರೆ, ವಿವೇಕಾ ಗಿರಿಜನ ಕಲಿಕಾ ಕೇಂದ್ರ ಎಂಬ ಹೆಸರಿನಲ್ಲಿ ಗಿರಿಜನ ಮಕ್ಕಳಿಗೆ ಹೊಸಹಳ್ಳಿಯಲ್ಲಿ ವಸತಿ ಶಾಲೆ, ಸರಗೂರಿನಲ್ಲಿ ವಿವೇಕಾ ಸ್ಕೂಲ್ ಆಫ್ ಎಕ್ಸ್‌ಲೆನ್ಸ್ ಎಂಬ ಗ್ರಾಮೀಣ ಶಾಲೆ, ಹೊಸಹಳ್ಳಿಯಲ್ಲಿ ವಿವೇಕಾನಂದ ಶಿಕ್ಷಕರ ತರಬೇತಿ ಮತ್ತು ಸಂಶೋಧನಾ ಕೇಂದ್ರ, ಮೈಸೂರಿನಲ್ಲಿ ವಿವೇಕಾನಂದ ಇನ್ಸಿಟ್ಯೂಟ್ ಫಾರ್ ಲೀಡರ್‌ಶಿಪ್ ಡೆವಲಪ್‌ಮೆಂಟ್ಸ್, ವಿವೇಕಾನಂದ ಭಾರತೀಯ ಅಧ್ಯಯನ ಸಂಸ್ಥೆ, ಗ್ರಾಸ್ ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್ ಕೇಂದ್ರಗಳ ಮೂಲಕ ಹಾಗೂ ಸಂಸ್ಥೆಯ 50ಕ್ಕೂ ಹೆಚ್ಚು ವಿವಿಧ ಯೋಜನೆಗಳ ಮೂಲಕ ಕರ್ನಾಟಕ ರಾಜ್ಯಾದ್ಯಂತ ಸುಮಾರು 5 ಲಕ್ಷಕ್ಕೂ ಹೆಚ್ಚು ಜನರನ್ನು ತಲುಪಿದೆ. ಸಂಸ್ಥೆಯ ಕೇಂದ್ರಗಳು ರಾಜ್ಯದಲ್ಲಿ ಅಲ್ಲದೆ ಅಮೇರಿಕಾ ಮತ್ತು ಲಂಡನ್‌ನಲ್ಲಿ ತನ್ನ ಕೇಂದ್ರಗಳನ್ನು ಹೊಂದಿವೆ.

ಡಾ॥ ಆರ್.ಬಾಲಸುಬ್ರಮಣ್ಯಂ (ಬಾಲು) ರವರು ರಾಜ್ಯ, ರಾಷ್ಟ್ರೀಯ ಮತ್ತು ಇತರ ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದು, ಇವರು ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯದ ಅನೇಕ ಯೋಜನಾ ಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸುವ ಮೂಲಕ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಕಾರ್ಯರೂಪಕ್ಕೆ ತಮ್ಮ ಅಪಾರ ಅನುಭವವನ್ನು ಧಾರೆ ಎರೆದಿದ್ದಾರೆ. ರಾಷ್ಟ್ರದ ವಿವಿಧ ಕಡೆ ಕೆಲಸ ನಿರ್ವಹಿಸುತ್ತಿರುವ ಹಲವು ಸರ್ಕಾರೇತರ ಸಂಘಟನೆಗಳ ಸಲಹಾ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇದಲ್ಲದೆ ಹಾರ್ವರ್ಡ್ ಮತ್ತು ಐಐಎಂ–ಬಿ ನಲ್ಲಿ ನಿಯಮಿತವಾಗಿ ಉಪನ್ಯಾಸಕರಾಗಿ ನಾಯಕತ್ವದ ಮೇಲೆ ಬೋಧನೆಯನ್ನು, ಅಮೇರಿಕಾದ ಕಾರ್ನೆಲ್ ವಿಶ್ವವಿದ್ಯಾಲಯದ ಫ್ರಾಂಕ್ ರೋಡ್ಸ್

ಪ್ರಾಧ್ಯಾಪಕರಾಗಿ, ಅಯೋವಾ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಹಾಗು ವಿಶ್ವದ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ, ನಾಯಕತ್ವ, ಸ್ವಯಂ ಸೇವಾ ಸಂಸ್ಥೆಗಳ ನಿರ್ವಹಣೆ, ಬಡತನ ಮತ್ತು ಅಭಿವೃದ್ಧಿ, ಜಾಗತಿಕ ಆರೋಗ್ಯ ವಿಷಯಗಳ ಕುರಿತಂತೆ ಉಪನ್ಯಾಸಗಳನ್ನು ನೀಡುತ್ತಾರೆ. ಅನೇಕ ವರ್ಷಗಳಿಂದ ಕೇಂದ್ರ ಹಾಗು ರಾಜ್ಯ ಸರ್ಕಾರದ ಹಲವು ಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಭ್ರಷ್ಟಾಚಾರ ನಿರ್ಮೂಲನ ಆಂದೋಲನದಲ್ಲಿ ಸಕ್ರಿಯರಾಗಿರುವ ಇವರು ರಾಜ್ಯದ ವೈದ್ಯಕೀಯ ಕ್ಷೇತ್ರದಲ್ಲಿ ಹಾಗು ಪಡಿತರ ವ್ಯವಸ್ಥೆಯಲ್ಲಿ ಆಗಿರುವ ಭ್ರಷ್ಟಾಚಾರ ಮತ್ತು ದುರಾಡಳಿತವನ್ನು ಹೊರಗೆಳೆಯಲು ಕರ್ನಾಟಕದ ಲೋಕಾಯುಕ್ತ ಸಂಸ್ಥೆಯ ವಿಶೇಷ ತನಿಖಾಧಿಕಾರಿಯಾಗಿ, ನೆರವು ನೀಡಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠದ ಮುಖ್ಯಸ್ಥರು ಮತ್ತು ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆರೋಗ್ಯ, ಶಿಕ್ಷಣ, ಸಾಮಾಜಿಕ, ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ವಿಶ್ವಬ್ಯಾಂಕ್ ಒಳಗೊಂಡಂತೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಅನೇಕ ಸಂಸ್ಥೆಗಳಿಗೆ ಸಲಹೆಗಾರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ರಾಷ್ಟ್ರ ನಿರ್ಮಾಣದ ಪವಿತ್ರ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಮತ್ತು ಪಾಲ್ಗೊಳ್ಳುವಿಕೆ ಮತ್ತು ಸುಸ್ಥಿರ ಅಭಿವೃದ್ಧಿ ಪರಿಕಲ್ಪನೆಯ ಬಗ್ಗೆ ದೇಶದಾದ್ಯಂತ ಸಂಚರಿಸಿ, ಯುವಕರನ್ನು ಹುರಿದುಂಬಿಸುತ್ತಾ, ಪ್ರೇರೇಪಿಸುತ್ತಿದ್ದಾರೆ. ಟಾಟಾ ಸಂಸ್ಥೆಯ ಸ್ಕಾಲರ್ ಆಗಿ, ಹಾರ್ವರ್ಡ್ ಕೆನಡಿ ಸ್ಕೂಲ್‌ನ ಮ್ಯಾಸನ್ ಫೆಲೋ ಹಾಗೂ ಹಾರ್ವರ್ಡ್ ವಿಶ್ವವಿದ್ಯಾಲಯದ, ಲಾಭರಹಿತ ಹಾಸರ್ ಸೆಂಟರ್‌ನ ಫೆಲೋ ಆಗಿದ್ದಾರೆ. ಕನ್ನಡ ಹಾಗೂ ಇಂಗ್ಲೀಷ್ ದಿನಪತ್ರಿಕೆಗಳಲ್ಲಿ ಮತ್ತು ತಮ್ಮ ಬ್ಲಾಗ್‌ನಲ್ಲಿ, ವೇದಾಂತ ಕೇಸರಿ ಮತ್ತು ಇತರ ಪ್ರಕಟಣೆಗಳಲ್ಲಿ ಬಾಲುರವರು ಬರೆಯುವ ಅಭಿವೃದ್ಧಿ ವಿಷಯಗಳ ಕುರಿತ ಲೇಖನಗಳು ಬಹಳ ಜನಪ್ರಿಯವಾಗಿವೆ.

ಪ್ರಸ್ತುತ ಇವರು, ನಾಯಕತ್ವ ಕಾರ್ಯಾಗಾರಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಪೊರೇಟ್, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ನಡೆಸುತ್ತಿದ್ದು, ಪ್ರಾಚೀನ ಭಾರತೀಯ ಸಂಸ್ಕೃತಿ ಮತ್ತು ತತ್ವಶಾಸ್ತ್ರಗಳಲ್ಲಿ ಹೊಂದಿರುವ ನಾಯಕತ್ವಕ್ಕೆ ಸಂಬಂಧಿಸಿದ ಪಾಠಗಳನ್ನು ಅಧ್ಯಯನ ನಡೆಸುತ್ತಿದ್ದು, ಸಧ್ಯಕ್ಕೆ ಮೈಸೂರಿನಲ್ಲಿ ವಾಸವಾಗಿರುವ ಅವರನ್ನು drrbalu@gmail.com ನಲ್ಲಿ ಸಂಪರ್ಕಿಸಬಹುದಾಗಿದೆ.